ಸರಯೂ
ಸರಯೂ
ವಿದ್ಯಾಕೇಂದ್ರ ವಾರ್ತಾಪತ್ರ

SARAYU - Kannada Monthly September : 2014 Vol. :1 Issue : 7 5116/ಜಯ ಸಂ ಸಪ್ಟೆಂಬರ್ 2014 ಪುಟಗಳು : 8

ಶ್ರೀರಾಮ ಪ್ರಥಮದರ್ಜೆ ಮಹಾವಿದ್ಯಾಲಯದಲ್ಲಿ ಸಂಪನ್ನಗೊಂಡ

## ಮಂಗಳೂರು ವಿಶ್ವವಿದ್ಯಾನಿಲಯ ಮಟ್ಟದ ಪುರುಷರ ಹಾಗೂ ಮಹಿಳೆಯರ

# ಗುಡ್ಡಗಾಡು ಓಟ 2014-15

**ದಿನಾಂಕ 27.08.2014**



ಮಹಿಳೆಯರ ವಿಭಾಗದ ಓಟಕ್ಕೆ ಶ್ರೀ ಲೋಹಿತಾಕ್ಷ ಬೆರ್ಕಳ ಇವರಿಂದ ಚಾಲನೆ 6-45



ಪುರುಷರ ವಿಭಾಗದ ಓಟಕ್ಕೆ ಶ್ರೀ ರಾಜೇಶ್ ನಾಯಕ್ ಉಳಿಪಾಡಿಗುತ್ತು ಇವರು ನಿಶಾನೆ ತೋರಿದರು 7-00




9-30




ಪ್ರಶಸ್ತಿ ಪ್ರದಾನ ಕಾರ್ಯಕ್ರಮ 9-35

ಮಂಗಳೂರು ವಿಶ್ವವಿದ್ಯಾನಿಲಯ ಅಂತರಕಾಲೇಜು ಮಟ್ಟದ ಗುಡ್ಡಗಾಡು ಓಟವು ದಿನಾಂಕ 27.08.2014ರಂದು ಕಲ್ಲಡ್ಕದ ಶ್ರೀರಾಮ ಪ್ರಥಮ ದರ್ಜೆ ಕಾಲೇಜಿನ ಆಶ್ರಯದಲ್ಲಿ ನಡೆಯಿತು. ಬೆಳಗ್ಗೆ 6.45 ಕ್ಕೆ ಮಹಿಳೆಯರ ವಿಭಾಗಕ್ಕೆ ಪ್ರಥಮದರ್ಜೆ ಗುತ್ತಿಗೆದಾರರಾದ ಲೋಹಿತಾಕ್ಷ ಬೆರ್ಕಳ; ಪುರುಷರ ವಿಭಾಗಕ್ಕೆ ಶ್ರೀ ರಾಜೇಶ್ ನಾಯಕ್ ಉಳಿಪಾಡಿಗುತ್ತು ಚಾಲನೆ ನೀಡಿದರು.

ಒಟ್ಟು 29 ಕಾಲೇಜುಗಳಿಂದ ಪುರುಷರ ವಿಭಾಗದಲ್ಲಿ 137, ಮಹಿಳೆಯರ ವಿಭಾಗದಲ್ಲಿ 86, ಒಟ್ಟು 223 ಮಂದಿ ಸ್ಪರ್ಧಾಳುಗಳು ಭಾಗವಹಿಸಿದ್ದರು.

ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ವಿಶ್ವವಿದ್ಯಾನಿಲಯದ ದೈಹಿಕ ಶಿಕ್ಷಣ ನಿರ್ದೇಶಕ ಡಾ। ಎಚ್. ನಾಗಲಿಂಗಪ್ಪ ಇವರು ಪ್ರಶಸ್ತಿ ವಿತರಿಸಿ, ಮಾತನಾಡಿದರು.

ವೇದಿಕೆಯಲ್ಲಿ ನಾರಾಯಣ ಸೋಮಯಾಜಿ, ಅಧ್ಯಕ್ಷರು, ಡಾ। ಪ್ರಭಾಕರ ಭಟ್ ಕಲ್ಲಡ್ಕ, ಸಂಚಾಲಕರು ಶ್ರೀರಾಮ ವಿದ್ಯಾಕೇಂದ್ರ ಮಂಗಳೂರು ವಿಶ್ವವಿದ್ಯಾನಿಲಯದ ದೈಹಿಕ ಶಿಕ್ಷಣ ವಿಭಾಗದ ಉಪನಿರ್ದೇಶಕ ಡಾ। ಕಿಶೋರ್ ಕುಮಾರ್ ಸಿ.ಕೆ., ಕಲ್ಲಡ್ಕ ವಿಜಯಾ ಬ್ಯಾಂಕ್‌ನ ಶಾಖಾ ಪ್ರಬಂಧಕ ಡೆರಿಕ್ ಡಿಸೋಜಾ, ಕಲ್ಲಡ್ಕ ಲಕ್ಷ್ಮೀ ನಿವಾಸ ಹೋಟೇಲ್ ಮಾಲಿಕ ಶಿವರಾಮ ಹೊಳ್ಳ, ಮಂಗಳೂರು ವಿಶ್ವವಿದ್ಯಾನಿಲಯದ ಮಾಜಿ ಸಿಂಡಿಕೇಟ್ ಸದಸ್ಯ ಹರೀಶ್ ಆಚಾರ್ ಉಪಸ್ಥಿತರಿದ್ದರು.

ಇದೇ ಸಂದರ್ಭದಲ್ಲಿ ವಿವಿಯಲ್ಲಿ ಕಳೆದ 30 ವರ್ಷಗಳಿಂದ ದೈಹಿಕ ಶಿಕ್ಷಣ ನಿರ್ದೇಶಕರಾಗಿ ಸೇವೆ ಸಲ್ಲಿಸಿ, ಸದ್ಯದಲ್ಲೇ ನಿವೃತ್ತರಾಗಲಿರುವ ಡಾ। ಎಚ್. ನಾಗಲಿಂಗಪ್ಪ ಇವರನ್ನು ಗೌರವಿಸಲಾಯಿತು.

ಕಾಲೇಜಿನ ಪ್ರಾಂಶುಪಾಲ ಕೃಷ್ಣಪ್ರಸಾದ ಕಾಯರ್‌ಕಟ್ಟೆ ಸ್ವಾಗತಿಸಿ, ಕನ್ನಡ ಉಪನ್ಯಾಸಕ ಯತಿರಾಜ್ ವಂದಿಸಿದರು. ಇತಿಹಾಸ ಉಪನ್ಯಾಸಕಿ ಶ್ರೀಮತಿ ರೇಖಾ ಕಾರ್ಯಕ್ರಮ ನಿರೂಪಿಸಿದರು. ದೈಹಿಕ ಶಿಕ್ಷಣ ನಿರ್ದೇಶಕ ಕರುಣಾಕರ್ ಕಾರ್ಯಕ್ರಮದ ಉಸ್ತುವಾರಿ ವಹಿಸಿದ್ದರು.

ಚಿಂತನರಶ್ಮಿ

# ಬೇಡಲು ಅಲ್ಲ; ಕೊಡಲು ಬಂದಿರುವೆ !

ಗುಜರಾತಿನ ಸೌರಾಷ್ಟ್ರದಲ್ಲಿ ಸತತ ಮೂರುವರ್ಷಗಳಿಂದ ಭೀಕರ ಬರಗಾಲ. ಜನ ಕಂಗಾಲಾಗಿದ್ದರು. ಆಸುಪಾಸಿನ ಜನ ಅಲ್ಲಲ್ಲಿ 'ಸುಖಡಿ' (ತುಪ್ಪ-ಹಿಟ್ಟನಿಂದ ಮಾಡಿದ ಆಹಾರ -ರೊಟ್ಟಿ) ಸಂಗ್ರಹಿಸಿ ಕೊಡುವ ಯೋಜನೆ ಹಾಕಿದ್ದರು.

ಗುಜರಾತಿನ ಬೇರೆ ಬೇರೆ ಪಟ್ಟಣಗಳ ಜನರು ಪರಿಹಾರದಲ್ಲಿ ತೊಡಗಿದರು. ಕಾರ್ಯಕರ್ತರ ಕರೆಗೆ ಸ್ಪಂದಿಸಿದರು. ಸುಖಡಿ ರಾಶಿರಾಶಿಯಾಗಿ ಬಂದು ಬೀಳತೊಡಗಿತು. ಇಂಥ ಸುಖಡಿ ಸಂಗ್ರಹ ಕೇಂದ್ರದೆದುರು ಭಿಕಾರಿ ಮುದುಕಿಯೊಬ್ಬಳು ಬಂದಳು. ಈಕೆ ಭಿಕ್ಷೆ ಬೇಡಲು ಬಂದಿರಬಹುದೆಂದು ಅಲ್ಲಿದ್ದ ಸ್ವಯಂಸೇವಕರು ಯೋಚಿಸಿದರು. 'ಅಮ್ಮಾ ಇಲ್ಲೇಕೆ ಬಂದಿರುವಿ ? ಇವು ಬರಗಾಲ ಪೀಡಿತರಿಗೆ ಹಂಚಲು, ನಿಮಗೆ ಕೊಡಲಲ್ಲ' ಎಂದೊಬ್ಬ ಹೇಳಿದ.

ಆಗ ಆ ಮುದುಕಿ ಗೊತ್ತು, 'ನಾನೂ ನನ್ನಿಂದಾದ ಸಹಾಯ ಮಾಡಲೆಂದೇ ಇಲ್ಲಿಗೆ ಬಂದಿರುವೆ. ಎರಡು ದಿನಗಳ ಭಿಕ್ಷೆಯಿಂದ ಈ ತುಂಡು ಸುಖಡಿ ಮಾಡಿ ತಂದಿರುವೆ. ಅದೂ ಶುದ್ಧ ತುಪ್ಪದ್ದೇ ........... ತೆಗೆದುಕೊಳ್ಳಿ ............' ಎನ್ನುವಾಗ ಆಕೆಯ ಕಣ್ಣುಗಳಲ್ಲಿ ಧನ್ಯತೆಯ ಹೊಳಪು ಎದ್ದು ಕಾಣುತ್ತಿತ್ತು.

## ಅಖಂಡ ಭಾರತ ಸಂಕಲ್ಪ

ಶ್ರೀರಾಮ ವಿದ್ಯಾಕೇಂದ್ರದಲ್ಲಿ 68ನೇ ಸ್ವಾತಂತ್ರ್ಯ ದಿನಾಚರಣೆಯನ್ನು ವಿದ್ಯಾಕೇಂದ್ರದ ಎಲ್ಲಾ ಮಕ್ಕಳ, ಅಧ್ಯಾಪಕರ ಪಾಲ್ಗೊಳ್ಳುವಿಕೆಯಲ್ಲಿ ನಡೆಸಲಾಯಿತು. ನಂತರ ವಿವಿಧ ವಿಭಾಗಗಳಲ್ಲಿ ಸಾಂಸ್ಕೃತಿಕ, ಸಭಾ ಕಾರ್ಯಕ್ರಮಗಳನ್ನು ನಡೆಸಲಾಯಿತು.

ಪ್ರಾಥಮಿಕ ವಿಭಾಗದ ಕಾರ್ಯಕ್ರಮದಲ್ಲಿ ಶ್ರೀರಾಮ ಪ್ರೌಢ ಶಾಲೆಯ ಕಲಾ ಶಿಕ್ಷಕರಾದ ಶ್ರೀ ಜಿನ್ನಪ್ಪ ಸ್ವಾತಂತ್ರ್ಯ ಹೋರಾಟದ ಸಂದರ್ಭದಲ್ಲಿ ಭಾರತೀಯರ ಬಲಿದಾನಗಳನ್ನು ತಿಳಿಸಿಕೊಟ್ಟರು. ಸಾಂಸ್ಕೃತಿಕ ಮತ್ತು ಕ್ರೀಡಾ ಸ್ಪರ್ಧೆಗಳಲ್ಲಿ ವಿಜೇತರಾದ ವಿದ್ಯಾರ್ಥಿಗಳಿಗೆ ಬಹುಮಾನ ನೀಡಿ ಅಭಿನಂದಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶ್ರೀಯುತ ಪಿ.ಕೆ.ಪದ್ಮನಾಭ ವಹಿಸಿದ್ದು ಮುಖ್ಯೋಪಾಧ್ಯಾಯ ರವಿರಾಜ್ ಶ್ರೀಮಾನ್, ಶಿವಗಿರಿ ಸತೀಶ್ ಭಟ್ ಉಪಸ್ಥಿತರಿದ್ದರು. ನಂತರ ಮಕ್ಕಳಿಂದ ಸಾಂಸ್ಕೃತಿಕ ಕಾರ್ಯಕ್ರಮ ನಡೆಯಿತು.

ಪ್ರೌಢಶಾಲೆಯ ಸಭಾ ಕಾರ್ಯಕ್ರಮದಲ್ಲಿ ಶಾರೀರಿಕ ಶಿಕ್ಷಣ ಶಿಕ್ಷಕ ಶ್ರೀ ರಾಧಕೃಷ್ಣ ಅಡ್ಯಂತಾಯ ಸ್ವಾತಂತ್ರ್ಯ ದಿನವನ್ನು ಉದ್ದೇಶಿಸಿ ಮಾತನಾಡಿದರು. ಅಧ್ಯಕ್ಷತೆಯನ್ನು ಹಿರಿಯ ಶಿಕ್ಷಕ ಶ್ರೀ ರಮೇಶ್ ಎನ್. ವಹಿಸಿದ್ದರು. ವಿವಿಧ ಸಂಘಗಳಾದ ಸಾಹಿತ್ಯ, ಗಣಿತ, ಇತಿಹಾಸ ಸಂಘಗಳ ಉದ್ಘಾಟನೆ ಈ ಸಂಧರ್ಭದಲ್ಲಿ ನೆರವೇರಿಸಲಾಯಿತು.

ಇತಿಹಾಸ ಸಂಘದ ವತಿಯಿಂದ ರಾಷ್ಟ್ರ ಚಿಂತನೆಯನ್ನು ಒಳಗೊಂಡ 'ರಾಷ್ಟ್ರ ನಮನ-ಪಾಂಚಜನ್ಯ ಮೊಳಗಿಸಿ ರಾಷ್ಟ್ರವ ಅಖಂಡಗೊಳಿಸೋಣ' ಎಂಬ ಅಖಂಡ ಭಾರತ ಸಂಕಲ್ಪ ಕೈಗೊಳ್ಳುವ ಕಾರ್ಯಕ್ರಮ ನಡೆಯಿತು. ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳು ಮನಮೋಹಕವಾದ ರಾಷ್ಟ್ರಪುರುಷರ ಚರಿತ್ರೆ, ಭರತ ನಾಟ್ಯ, ನೃತ್ಯರೂಪಕದಂತ ಹಲವು ಪ್ರದರ್ಶನ ನೀಡಿದರು.

ಪದವಿ ಪೂರ್ವ ವಿಭಾಗದ ಕಾರ್ಯಕ್ರಮದಲ್ಲಿ ರಾ.ಸ್ವ.ಸೇವಕಾ ಸಂಘದ ಕಾರ್ಯಕರ್ತ ರಾಜೇಶ್ ಸುಳ್ಯ ಮಾತನಾಡಿ ರಾಷ್ಟ್ರೀಯ ಅಖಂಡತೆ-ಯ ಬಗ್ಗೆ ದಿಕ್ಸೂಚಿ ಭಾಷಣ ಮಾಡಿದರು. ಭಾರತವು ಸಾಂಸ್ಕೃತಿಕವಾಗಿ ಅಖಂಡವಾಗಿತ್ತು. ಆದರೆ ವಿಭಿನ್ನ ವ್ಯಕ್ತಿಗಳ ಆಕ್ರಮಣದಿಂದ ಛಿದ್ರವಾಗಿತ್ತು. ಅದನ್ನು ಕೈಜೋಡಿಸುವ ಪ್ರಯತ್ನ ಮುಂದಿನ ದಿನಗಳಲ್ಲಿ ಆಗಬೇಕೆಂದು ಸಂಕಲ್ಪ ಮಾಡಿದರು. ಅಧ್ಯಕ್ಷತೆಯನ್ನು ಪ್ರಾಂಶುಪಾಲ ಕೃಷ್ಣಪ್ರಸಾದ್ ವಹಿಸಿದ್ದರು.

ಪದವಿ ವಿಭಾಗದಲ್ಲಿ ಪ್ರತಾಪ ಕ್ರೀಡಾ ಸಂಘದ ವತಿಯಿಂದ ಹುಡುಗರ ವಿಭಾಗದ ವಾಲಿಬಾಲ್ ಹಾಗೂ ಕಬಡ್ಡಿ ಹುಡುಗಿಯರ ವಿಭಾಗಕ್ಕೆ ತ್ರೋಬಾಲ್ ಹಾಗೂ ಸಂಗೀತ ಕುರ್ಚಿ ಸ್ಪರ್ಧೆಗಳು ನಡೆದವು.

## ವಿದ್ಯಾಭಾರತಿ ಕ್ರೀಡಾಕೂಟ : 23 ಮತ್ತು 24-08-2014




ವಿದ್ಯಾಭಾರತಿ ಪ್ರಾಂತೀಯ ಹಾಗೂ ಕ್ಷೇತ್ರಿಯ ವಾಲಿಬಾಲ್ ಮತ್ತು ತ್ರೋಬಾಲ್ ಪಂದ್ಯಾಟವು ಶ್ರೀರಾಮ ವಿದ್ಯಾಕೇಂದ್ರದಲ್ಲಿ ನಡೆಯಿತು. ವಿದ್ಯಾಭಾರತಿ ದಕ್ಷಿಣ ಕನ್ನಡ ಜಿಲ್ಲಾಧ್ಯಕ್ಷ ಶಾರದಾ ವಿದ್ಯಾಲಯದ ಸಂಚಾಲಕ ಪ್ರೊ। ಎಂ. ಬಿ. ಪುರಾಣಿಕ್, ಸರಸ್ವತಿ ವಿದ್ಯಾಲಯದ ಕಡಬದ ಸಂಚಾಲಕ ಶ್ರೀ ವೆಂಕಟ್ರಮಣ ಭಟ್, ಜಿಲ್ಲಾ ಕಾರ್ಯದರ್ಶಿ ಲೋಕಯ್ಯ ಡಿ., ಪ್ರಾಂತೀಯ ಸಹಕಾರ್ಯದರ್ಶಿ ವಸಂತ ಮಾಧವ, ತಾ.ಪಂ. ಸದಸ್ಯ ಚೆನ್ನಪ್ಪ ಕೋಟ್ಯಾನ್ ಮೊದಲಾದ ಗಣ್ಯರು ಉಪಸ್ಥಿತರಿದ್ದರು.


| | | |
|---|---|---|
| ಸಂಪಾದಕರು, ಮುದ್ರಕರು ಹಾಗೂ ಪ್ರಕಾಶಕರು | : | ನಾರಾಯಣ ಸೋಮಯಾಜಿ, ಅಧ್ಯಕ್ಷರು, ಶ್ರೀರಾಮ ವಿದ್ಯಾಕೇಂದ್ರ |
| ಕಾರ್ಯನಿರ್ವಾಹಕ ಸಂಪಾದಕರು | : | ಮಹೇಶ ನೆಟ್ಲ |
| ಸಹಸಂಪಾದಕರು | : | ದಿವ್ಯಾಕುಮಾರಿ, ಕಾವ್ಯ, ಜ್ಯೋತಿ, ಚಂದ್ರಿಕಾ, ಶ್ರೀಮತಿ ವಿನುತ ಎಸ್.ಎನ್. |
| ವ್ಯವಸ್ಥಾಪಕ ಸಂಪಾದಕರು | : | ಸತೀಶ ಭಟ್, ಶಿವಗಿರಿ |
| ವಿನ್ಯಾಸ | : | ಕುಶಲಪ್ಪ ಅಮ್ಮೂರು |

## ಶಿಶುಮಂದಿರ

**ಪಾಲಕರ ಸಭೆ : 15.08.2014**

ಶ್ರೀರಾಮ ವಿದ್ಯಾಕೇಂದ್ರದ ವತಿಯಿಂದ ನಡೆಸಲ್ಪಡುವ ವಿವಿಧ ಶಿಶು ಮಂದಿರಗಳಲ್ಲಿ ಪಾಲಕರ ಸಭೆಯನ್ನು ನಡೆಸಲಾಯಿತು. ವಿದ್ಯಾಕೇಂದ್ರದ ಸಂಚಾಲಕ ಡಾ| ಪ್ರಭಾಕರ ಭಟ್ ಪೋಷಕರಿಗೆ ಸಂಸ್ಥೆಯ ಹಿನ್ನೆಲೆ, ಉದ್ದೇಶಗಳ ಬಗ್ಗೆ ಮಾರ್ಗದರ್ಶನ ಮಾಡಿದರು.

**ಅಕ್ಕ ಮಹಾದೇವಿ ಶಿಶುಮಂದಿರ**ದಲ್ಲಿ 15.08.14 ರಂದು ನಡೆದ ಸಭೆಯಲ್ಲಿ ಶ್ರೀರಾಮ ವಿದ್ಯಾಕೇಂದ್ರದ ಅಧ್ಯಕ್ಷ ಶ್ರೀ ನಾರಾಯಣ ಸೋಮಯಜಿ ಉಪಸ್ಥಿತರಿದ್ದರು. ಒಟ್ಟು 17 ಮಕ್ಕಳ ಪಾಲಕರು, ಪೋಷಕರು, 5 ಜನ ಕಮಿಟಿ ಸದಸ್ಯರು ಉಪಸ್ಥಿತರಿದ್ದರು. ಶ್ರೀಮತಿ ವಿದ್ಯಾಪ್ರಭು ಸ್ವಾಗತಿಸಿ, ಶ್ರೀಮತಿ ಸುಷ್ಮಾರವರು ವಂದಿಸಿ, ಶ್ರೀಮತಿ ರವಿಕಲಾ ಕಾರ್ಯಕ್ರಮ ನಿರೂಪಿಸಿದರು.

**ಶ್ರೀಕೃಷ್ಣ ಶಿಶುಮಂದಿರ** ಸಜಿಪದಲ್ಲಿ 19.08.2014ರಂದು ನಡೆದ ಪಾಲಕರ ಸಭೆಯಲ್ಲಿ 4 ದಂಪತಿಗಳು ಸೇರಿ ಒಟ್ಟು 24 ಮಂದಿ ಪಾಲಕರು ಸಭೆಯಲ್ಲಿ ಭಾಗವಹಿಸಿದ್ದರು. ಶ್ರೀಮತಿ ಅನ್ನಪೂರ್ಣೇಶ್ವರಿ ಪ್ರಾರ್ಥಿಸಿ, ಶ್ರೀಮತಿ ಜಯಲಲಿತ ಕಾರ್ಯಕ್ರಮ ನಿರೂಪಿಸಿ ಧನ್ಯವಾದಗೈದರು.

**ಶ್ರೀ ಸರಸ್ವತಿ ಶಿಶುಮಂದಿರ ಶೇಡಿಗುರಿ** ಇಲ್ಲಿ 11.08.2014ರಂದು ನಡೆದ ಪಾಲಕರ ಸಭೆಯಲ್ಲಿ 4 ದಂಪತಿಗಳು ಸೇರಿ ಒಟ್ಟು 35 ಮಂದಿ ಪಾಲಕರು ಸಭೆಯಲ್ಲಿ ಉಪಸ್ಥಿತರಿದ್ದರು. ಸರಸ್ವತಿ ಶಿಶುಮಂದಿರ ಸಂಚಾಲಕ ಶ್ರೀ ದಿವಾಕರ ಸ್ವಾಗತಿಸಿ, ಶ್ರೀ ಕಮಲಾಕ್ಷ ವಂದಿಸಿದರು.

**ಶ್ರೀ ಗಣೇಶ ಶಿಶುಮಂದಿರ ಬೊಂಡಾಲ** ಇಲ್ಲಿ 27.08.2014ರಂದು ನಡೆದ ಪಾಲಕರ ಸಭೆಯಲ್ಲಿ 25 ಮಂದಿ ಉಪಸ್ಥಿತರಿದ್ದರು. ಶ್ರೀಮತಿ ಶೋಭಾ ಸ್ವಾಗತಿಸಿ, ಶ್ರೀಮತಿ ಭವಾನಿ ವಂದಿಸಿ, ಶ್ರೀಮತಿ ಉಮಾವತಿ ಕಾರ್ಯಕ್ರಮ ನಿರೂಪಿಸಿದರು.

**ವರಮಹಾಲಕ್ಷ್ಮೀ ಪೂಜೆ –18.08.2014**

ಶ್ರೀರಾಮ ಶಿಶುಮಂದಿರದ ವತಿಯಿಂದ ಕಲ್ಲಡ್ಕ ಸಮೀಪದ ಮುಲಾರು ಶ್ರೀ ದುರ್ಗಾಪರಮೇಶ್ವರಿ ದೇವಸ್ಥಾನ ಹಾಗೂ ಶ್ರೀರಾಮ ಶಿಶುಮಂದಿರ ಮತ್ತು ಶ್ರೀವರಮಹಾಲಕ್ಷ್ಮೀ ಪೂಜಾ ಸಮಿತಿಯ ವತಿಯಿಂದ ಶ್ರೀಶಾರದಾ ಭಜನಾಮಂದಿರ ವೀರಕಂಭ ಇಲ್ಲಿ ವರಮಹಾಲಕ್ಷ್ಮೀ ಪೂಜೆ ಮತ್ತು ರಕ್ಷಾಬಂಧನ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು. ರಾಷ್ಟ್ರ ಸೇವಿಕಾ ಸಮಿತಿಯ ದಕ್ಷಿಣ ಪ್ರಾಂತ ಸಂಪರ್ಕ ಪ್ರಮುಖ್ ಡಾ| ಕಮಲಾ ಭಟ್ ಹಾಗೂ ಶ್ರೀರಾಮ ಪದವಿಪೂರ್ವ ವಿದ್ಯಾಲಯದ ಉಪನ್ಯಾಸಕಿ ಭಗಿನಿ ಅಕ್ಷತಾ ಇಲ್ಲಿ ಕಾರ್ಯಕ್ರಮದ ಉದ್ದೇಶ ಮಹತ್ವಗಳನ್ನು ತಿಳಿಸಿದರು.

ಮುಲಾರಿನಲ್ಲಿ ಒಟ್ಟು 63 ಮಾತೆಯರು ವ್ರತಧಾರಿಗಳಾಗಿ ಭಾಗವಹಿಸಿದ್ದರು. ಭ| ದಿವ್ಯಾ ಪ್ರಾರ್ಥಿಸಿ, ಶ್ರೀಮತಿ ಲಕ್ಷ್ಮೀ ಸ್ವಾಗತಿಸಿ, ಭ| ಗಂಗಾ ವಂದಿಸಿ, ಶ್ರೀಮತಿ ರಾಜೀವಿ ಕಾರ್ಯಕ್ರಮ ನಿರೂಪಿಸಿದರು. ಒಟ್ಟು 350 ಮಂದಿ ಪೂಜೆಯಲ್ಲಿ ಭಾಗವಹಿಸಿದ್ದರು. ವೀರಕಂಭದಲ್ಲಿ ನಡೆದ ಕಾರ್ಯಕ್ರಮದಲ್ಲಿ 99 ವ್ರತಧಾರಿಗಳಿದ್ದು, 390 ಜನ ಪೂಜೆಯಲ್ಲಿ ಭಾಗವಹಿಸಿದ್ದರು ವೇದಿಕೆಯಲ್ಲಿ ಶ್ರೀಮತಿ ಜಯಂತಿ ಉಪಸ್ಥಿತರಿದ್ದರು. ಶ್ರೀಮತಿ ಶಶಿಕಲಾ ಸ್ವಾಗತಿಸಿ, ಶ್ರೀಮತಿ ಸೀಮಾ ವಂದಿಸಿ, ಶ್ರೀಮತಿ ಪ್ರೇಮಾ ಕಾರ್ಯಕ್ರಮ ನಿರೂಪಿಸಿದರು.

**ಶಿಶುಮಂದಿರದ ಚಟುವಟಿಕೆ ಕಾರ್ಯಗಾರ**
**12.08.2014 ರಿಂದ 14.08.2014**

ಶ್ರೀರಾಮ ಶಿಶುಮಂದಿರದಲ್ಲಿ ಪಾಲಕರಿಗೆ ಮುಖ್ಯ ಮಾತಾಜಿ ಭ| ಗಂಗಾ ಮಾತಾಜಿ ಶಿಶುಮಂದಿರದಲ್ಲಿ ನೀಡುವಂತಹ ಶಿಕ್ಷಣದ ಬಗ್ಗೆ ತಿಳಿಸಿಕೊಟ್ಟರು. ಮಗುವನ್ನು ಅರ್ಥಮಾಡಿಕೊಳ್ಳುವುದು, ಮಗುವಿನಲ್ಲಿರುವ ಸ್ವಭಾವಗಳು. ಹಾಗೆಯೇ ಶಿಶುಮಂದಿರದಲ್ಲಿ ಜೋಡಿಸಿಕೊಟ್ಟಂತಹ ಪ್ರತಿಯೊಂದು ಸಲಕರಣೆಗಳಲ್ಲಿಯೂ ಮಗುವಿನ ಇಂದ್ರಿಯ ವಿಕಾಸ ಯಾವ ರೀತಿ ಆಗುತ್ತದೆ ಎಂಬುದನ್ನು ಪ್ರಾತ್ಯಕ್ಷಿಕವಾಗಿ ಮಾಡಿ ತೋರಿಸಿದರು. ಒಟ್ಟು 107 ಪಾಲಕರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

**ಶ್ರೀ ಗಣೇಶ ಶಿಶುಮಂದಿರ ಬೊಂಡಾಲ**
**28–9–2014 ಗುರುವಾರ**

ಬೊಂಡಾಲ ಉತ್ಸಾಹಿ ತರುಣ ವೃಂದ ಮತ್ತು ಮಹಿಳಾ ಮಂಡಳಿ ವತಿಯಿಂದ ನಡೆಯುವ ಸಾರ್ವಜನಿಕ ಗಣೇಶೋತ್ಸವ ಕಾರ್ಯಕ್ರಮದಲ್ಲಿ ಬೊಂಡಾಲ ಶಿಶುಮಂದಿರದ 22 ಪುಟಾಣಿಗಳು ಹಾಗೂ ಪ್ರಾಥಮಿಕ ಶಾಲೆಯ 40 ಮಕ್ಕಳು ಸಾಂಸ್ಕೃತಿಕ ಕಾರ್ಯಕ್ರಮ ನೀಡಿದರು. ಬೊಂಡಾಲ ಪ್ರಾಥಮಿಕ ಶಾಲೆಯ ವಠಾರದಲ್ಲಿ ಈ ಕಾರ್ಯಕ್ರಮ ನಡೆದಿತ್ತು.

**ಶ್ರೀಕೃಷ್ಣ ಶಿಶುಮಂದಿರ ಸಜಿಪ** 30.09.2014

ಸಜಿಪ ಮುನ್ನೂರು ಯುವಕ ಸಂಘದ ವತಿಯಿಂದ ನಡೆಯುವ ಸಾರ್ವಜನಿಕ ಗಣೇಶೋತ್ಸವ ಕಾರ್ಯಕ್ರಮದಲ್ಲಿ ಶ್ರೀಕೃಷ್ಣ ಶಿಶುಮಂದಿರದ 20 ಪುಟಾಣಿಗಳು ಹಾಗೂ ಬಾಲಗೋಕುಲದ 16 ಮಕ್ಕಳು ಸಾಂಸ್ಕೃತಿಕ ಕಾರ್ಯಕ್ರಮ ನೀಡಿದರು. ಕಂದೂರಿನಲ್ಲಿ ಈ ಕಾರ್ಯಕ್ರಮ ನಡೆದಿತ್ತು.

## ಪ್ರಾಥಮಿಕ

**ಸಂಸ್ಕೃತೋತ್ಸವ ಹಾಗೂ ಸಾಮೂಹಿಕ ಹುಟ್ಟುಹಬ್ಬ** 23.08.2014




ವೇದವ್ಯಾಸ ಧ್ಯಾನಮಂದಿರದಲ್ಲಿ ಸಂಸ್ಕೃತೋತ್ಸವ ಮತ್ತು ಮಕ್ಕಳ ಸಾಮೂಹಿಕ ಹುಟ್ಟುಹಬ್ಬ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಕಾರ್ಯಕ್ರಮದ ಅತಿಥಿಗಳಾದ ಶ್ರೀಮತಿ ಸಾವಿತ್ರಿ ಮಾತಾಜಿಯವರು ಮಾತನಾಡುತ್ತಾ ಬುದ್ಧನ ಕಥೆ, ನಿತ್ಯ ವ್ಯವಹಾರದಲ್ಲಿ ಸಂಸ್ಕೃತ ಈ ರೀತಿಯಾಗಿ ಸಂಸ್ಕೃತದಿಂದ ಸಂಸ್ಕೃತಿಯ ಬಗ್ಗೆ ವಿವರಿಸಿದರು. ಇನ್ನೋರ್ವ ಅತಿಥಿಗಳಾದ ವೆಂಕಟರಮಣ ಭಟ್ ಹುಟ್ಟುಹಬ್ಬದ ಮಹತ್ವವನ್ನು ತಿಳಿಸಿಕೊಟ್ಟರು.

ವಿದ್ಯಾರ್ಥಿಗಳಿಂದ ಸಂಸ್ಕೃತದಲ್ಲಿ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆದವು. ವೇದಿಕೆಯಲ್ಲಿ ರಾಕೋಡಿ ಈಶ್ವರಭಟ್, ಪ್ರಾಥಮಿಕ ಮುಖ್ಯೋಪಾಧ್ಯಾಯರಾದ ರವಿರಾಜ್ ಕಣಂತೂರು ಉಪಸ್ಥಿತರಿದ್ದರು. ವಿದ್ಯಾರ್ಥಿಗಳಾದ ಕುಮಾರಿ ಅರ್ಚನಾ ಸ್ವಾಗತಿಸಿ, ರಕ್ಷಾ.ಪಿ ವಂದಿಸಿ, ಸುಧಾಂಶು ಮತ್ತು ರೇಷ್ಮಾ ಕಾರ್ಯಕ್ರಮ ನಿರೂಪಿಸಿದರು.

**ಪ್ರತಿಭಾ ಕಾರಂಜಿ**

ದಿನಾಂಕ 07.08.2014 ರಂದು ನಡೆದ ಕ್ಲಸ್ಟರ್ ಮಟ್ಟದ ಪ್ರತಿಭಾ ಕಾರಂಜಿ ಸ್ಪರ್ಧೆಯಲ್ಲಿ ಶ್ರೀರಾಮ ಪ್ರಾಥಮಿಕ ಶಾಲೆಯ 65 ಮಕ್ಕಳು ವಿವಿಧ ಸ್ಪರ್ಧೆಗಳಲ್ಲಿ ಭಾಗವಹಿಸಿದ್ದರು. ಹಿರಿಯ ಮತ್ತು ಕಿರಿಯ ವಿಭಾಗದ ವಿವಿಧ ಸ್ಪರ್ಧೆಗಳಲ್ಲಿ ಭಾಗವಹಿಸಿದ ವಿದ್ಯಾರ್ಥಿಗಳು ಒಟ್ಟು 26 ಬಹುಮಾನಗಳನ್ನು ಪಡೆದುಕೊಂಡಿರುತ್ತಾರೆ. ಹಿರಿಯ ವಿಭಾಗದಲ್ಲಿ ವೈಯಕ್ತಿಕ 7 ಪ್ರಥಮ, 3 ದ್ವಿತೀಯ, 2 ತೃತೀಯ ಹಾಗೂ ಗುಂಪು ವಿಭಾಗದಲ್ಲಿ 2 ಪ್ರಥಮ, 1 ತೃತೀಯ ಮತ್ತು ಕಿರಿಯ ವಿಭಾಗದಲ್ಲಿ ವೈಯಕ್ತಿಕ 7 ಪ್ರಥಮ, 1 ತೃತೀಯ ಹಾಗೂ ಗುಂಪು ವಿಭಾಗದಲ್ಲಿ 2 ಪ್ರಥಮ, 1 ದ್ವಿತೀಯ ಬಹುಮಾನಗಳನ್ನು ಪಡೆದುಕೊಂಡಿದ್ದಾರೆ.

## ಪ್ರೌಢ

### ಸಂಸ್ಕೃತೋತ್ಸವ ಹಾಗೂ ರಕ್ಷಾಬಂಧನ

ಸಂಸ್ಕೃತೋತ್ಸವ ಮತ್ತು ರಕ್ಷಾಬಂಧನ ಉತ್ಸವದಲ್ಲಿ ಸಂಸ್ಕೃತ ವಿದ್ವಾಂಸ ಕುಶಲ ನೇರಳಕಟ್ಟೆ,



'ಸಂಸ್ಕೃತ ಭಾಷಾ ಕಲಿಕೆಯು ರಾಷ್ಟ್ರೀಯ ಭಾವನೆಯನ್ನು ಜಾಗೃತಗೊಳಿಸಲು ಸಹಕಾರಿಯಾಗುವುದು. ಸಂಸ್ಕೃತ ಭಾರತೀಯ ಭಾಷೆಗಳಿಗೆ ತಾಯಿಯ ಸ್ಥಾನದಲ್ಲಿದ್ದು ಎಲ್ಲಾ ಭಾಷೆಗಳನ್ನು ಪೋಷಿಸುತ್ತಾ ಬಂದಿದೆ' ಎಂದು ಹೇಳಿದರು.

ಭಾರತದ ಆತ್ಮ ಆಧ್ಯಾತ್ಮಿಕ. ಭಾರತೀಯ ಜೀವನಪದ್ಧತಿ ವೇದಗಳಲ್ಲಿದೆ. ಪ್ರಾಚೀನ ಸಾಹಿತ್ಯಗಳು ಸಂಸ್ಕೃತದಲ್ಲಿದ್ದು ಹಿಂದೆ ಸಂಸ್ಕೃತ ಜನಭಾಷೆಯಾಗಿತ್ತು. ಇಂಗ್ಲಿಷ್ ಭಾಷೆಯಿಂದ ದೇಶೀಯ ಭಾಷೆ, ಸಂಸ್ಕೃತಿ ಮರೆಯಾಗುತ್ತಿದೆ ಎಂದು ವಿಷಾದಿಸಿದ ಅವರು ಸಂಸ್ಕೃತ ರಾಷ್ಟ್ರೀಯ ಭಾಷೆಯಾಗಬೇಕೆಂದರು.

ಪ್ರೌಢಶಾಲಾ ಮುಖ್ಯೋಪಾಧ್ಯಾಯ ವಸಂತಮಾಧವ ಅಧ್ಯಕ್ಷತೆ ವಹಿಸಿದ್ದರು. ವಿದ್ಯಾರ್ಥಿಗಳಾದ ಸುಜಿತ್ ಸ್ವಾಗತಿಸಿ, ಯಜ್ಞೇಶ ನಿರೂಪಿಸಿ ವಿರೂಪಾಕ್ಷ ವಂದಿಸಿದರು.

### ಪ್ರತಿಭಾ ಕಾರಂಜಿ 18.8.2014

ಕಡೇಶಿವಾಲಯ ಸ.ಪ್ರೌ.ಶಾಲೆ ಕಡೇಶಿವಾಲಯ ಇಲ್ಲಿ ನಡೆದ ವಲಯ ಮಟ್ಟದ ಪ್ರತಿಭಾ ಕಾರಂಜಿ ಸ್ಪರ್ಧೆಯಲ್ಲಿ ಶ್ರೀರಾಮ ಪ್ರೌಢಶಾಲೆಯ ವಿದ್ಯಾರ್ಥಿಗಳು 16ವಿವಿಧ ಸ್ಪರ್ಧೆಗಳಲ್ಲಿ ಭಾಗವಹಿಸಿ ಅದರಲ್ಲಿ 9ಪ್ರಥಮ ಸ್ಥಾನವನ್ನು ಮತ್ತು 7ದ್ವಿತೀಯ ಸ್ಥಾನವನ್ನು ಪಡೆದಿರುತ್ತಾರೆ. ಪ್ರಥಮ ಸ್ಥಾನ ಪಡೆದ ಸ್ಪರ್ಧೆಗಳು ತಾಲೂಕು ಮಟ್ಟದ ಸ್ಪರ್ಧೆಗೆ ಆಯ್ಕೆಯಾಗಿರುತ್ತಾರೆ.

### ಖೋ-ಖೋ ಸ್ಪರ್ಧೆ : 27.08.2014

ಕಲ್ಲಡ್ಕ ವಲಯ ಮಟ್ಟದ ಖೋ-ಖೋ ಸ್ಪರ್ಧೆ ಶ್ರೀರಾಮ ವಿದ್ಯಾಕೇಂದ್ರದ ಕ್ರೀಡಾಂಗಣದಲ್ಲಿ ನಡೆಸಲಾಯಿತು. ಸುಮಾರು 8 ಶಾಲೆಗಳಿಂದ ತಂಡಗಳು ಆಗಮಿಸಿದ್ದು ಪ್ರಥಮ ಸ್ಥಾನವನ್ನು ಶ್ರೀರಾಮ ಶಾಲೆಯು ಪಡೆದುಕೊಂಡಿದೆ.

### ವಿವಿಧ ಸಂಘಗಳ ಉದ್ಘಾಟನೆ : 15.08.2014

ಈ ಶೈಕ್ಷಣಿಕ ವರ್ಷದಲ್ಲಿ ವಿದ್ಯಾರ್ಥಿಗಳ ಪ್ರತಿಭೆಗಳಿಗೆ ಪ್ರೋತ್ಸಾಹ ನೀಡುವ ನಿಟ್ಟಿನಿಂದ ವಿವಿಧ ಸಂಘಗಳನ್ನು ರಚಿಸಲಾಗಿದ್ದು ಪ್ರತೀ ಸಂಘಕ್ಕೂ ಓರ್ವ ಶಿಕ್ಷಕರು ನಿರ್ದೇಶಕರಾಗಿರುತ್ತಾರೆ.

### ವೈದ್ಯಕೀಯ ಶಿಬಿರ :

ಬಂಟ್ವಾಳ ತಾಲೂಕಿನಲ್ಲಿರುವ 9ನೇ ತರಗತಿಯ ವಿಶೇಷ ಅಗತ್ಯವುಳ್ಳ ಮಕ್ಕಳಿಗಾಗಿ ಮುಂದುವರಿದ ವೈದ್ಯಕೀಯ ಶಿಬಿರ ಶ್ರೀರಾಮ ಪ್ರೌಢಶಾಲೆಯಲ್ಲಿ ನಡೆಯಿತು. ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಣ ಅಭಿಯಾನ, ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಚೇರಿ, ಕ್ಷೇತ್ರ ಸಂಪನ್ಮೂಲ ಕೇಂದ್ರದ ಸಹಯೋಗದಲ್ಲಿ ಯೇನಪೋಯ ಸಮುದಾಯ ಗ್ರಾಮೀಣ ಆರೋಗ್ಯ ರಕ್ಷಣೆ ಮತ್ತು ಅಭಿವೃದ್ಧಿ ಕೇಂದ್ರ ಮೆಡಿಕಲ್



ಕಾಲೇಜು ಆಸ್ಪತ್ರೆ ದೇರಳಕಟ್ಟೆ ಇವರ ವತಿಯಿಂದ ಶಿಬಿರ ಏರ್ಪಡಿಸಲಾಗಿತ್ತು. 'ಶಾರೀರಿಕವಾಗಿ ಮತ್ತು ಮಾನಸಿಕವಾಗಿ ದುರ್ಬಲವಾಗಿರುವ ಮಕ್ಕಳನ್ನು ಗುರುತಿಸಿ ಸೂಕ್ತ ಸಲಹೆ ಹಾಗೂ ಚಿಕಿತ್ಸೆಯ ಮೂಲಕ ಮುಖ್ಯವಾಹಿನಿಗೆ ತರಲು ಮಕ್ಕಳ ವೈದ್ಯಕೀಯ ತಪಾಸಣಾ ಶಿಬಿರ ನಡೆಸಲಾಗುತ್ತಿದೆ. ಮಕ್ಕಳ ಕಲಿಕೆಗೆ ಅನುಕೂಲವಾಗುವಂತೆ ಆಹಾರ, ಆರೋಗ್ಯ ಮತ್ತು ಶಿಕ್ಷಣವನ್ನು ಮಕ್ಕಳಿಗೆ ನೀಡುವ ವ್ಯವಸ್ಥೆ ಸರ್ವ ಶಿಕ್ಷಣ ಅಭಿಯಾನದ ಮೂಲಕ ನಡೆಸುತ್ತಿದೆ' ಎಂದು ಬಂಟ್ವಾಳ ಕ್ಷೇತ್ರ ಶಿಕ್ಷಣಾಧಿಕಾರಿ ಶೇಷಶಯನ ಕಾ-ರಿಂಜ ಹೇಳಿದರು.

ಸರಕಾರಿ, ಹಾಗೂ ಅನುದಾನಿತ ಪ್ರಾಥಮಿಕ, ಪ್ರೌಢಶಾಲೆಗಳ ವಿಶೇಷ ಅಗತ್ಯವುಳ್ಳ ನೂರಕ್ಕೂ ಹೆಚ್ಚು ಮಕ್ಕಳು ಭಾಗವಹಿಸಿ ಪ್ರಯೋಜನ ಪಡೆದುಕೊಂಡರು.

ಯೇನಪೋಯ ಆರೋಗ್ಯ ಕೇಂದ್ರದ ನಿರ್ದೇಶಕ ಆರ್. ಎನ್. ಸುಜೀರ್, ಬಂಟ್ವಾಳ ಲಯನ್ಸ ಕ್ಲಬ್ ಅಧ್ಯಕ್ಷ ಶಿವಾನಂದ ಬಾಳಿಗಾ ಶಿಕ್ಷಣ ಸಮನ್ವಯಾಧಿಕಾರಿ ರಾಜೇಶ್, ನೋಡೆಲ್ ಅಧಿಕಾರಿ ಗಣೇಶ್, ಶಿಕ್ಷಣ ಸಂಯೋಜಕರಾದ ರಮಾನಂದ, ಕಮಾಲಾಕ್ಷ, ದೇವದಾಸ, ಮುಖ್ಯೋಪಾಧ್ಯಾಯ ವಸಂತ ಮಾಧವ ಮೊದಲಾದವರು ಉಪಸ್ಥಿತರಿದ್ದರು.

## ಪದವಿಪೂರ್ವ

### ವಿವಿಧ ಸಂಘಗಳ ಚಟುವಟಿಕೆಗಳು :

### ಭಾವನಾ ಸಾಂಸ್ಕೃತಿಕ ಸಂಘ :

**ರಂಗೋಲಿ ಸ್ಪರ್ಧೆ 6.8.14**

ಭಾವನಾ ಸಾಂಸ್ಕೃತಿಕ ಸಂಘದ ವತಿಯಿಂದ ನಡೆದ ರಂಗೋಲಿ ಸ್ಪರ್ಧೆಯಲ್ಲಿ ಸ್ವಾತಿ, ಸ್ವಾತಿ ಆಚಾರ್ಯ, ಬಿಂದುಶ್ರೀ ಪ್ರಥಮ ಸ್ಥಾನ ನಂದಿತಾ, ಹರ್ಷಿತಾ, ತೇಜ ದ್ವಿತೀಯ ಸ್ಥಾನ ಹಾಗೂ ಸೂರ್ಯಕಲಾ, ಶ್ರೀಷಾ, ಸುಶ್ಮಿತಾ ಎ ತೃತೀಯ ಸ್ಥಾನ ಪಡೆದಿರುತ್ತಾರೆ.

ಶ್ರೀ ಕೃಷ್ಣಜನ್ಮಾಷ್ಟಮಿ ಅಂಗವಾಗಿ ನಡೆದ ಚಿತ್ರಕಲಾ ಸ್ಪರ್ಧೆಯಲ್ಲಿ ಪ್ರಥಮ ಸ್ಥಾನವನ್ನು ಸ್ವಾತಿ ಕೆ.ಭಟ್,( ದ್ವಿತೀಯ ವಿಜ್ಞಾನ), ದ್ವಿತೀಯ ಸ್ಥಾನ ಮಧುಶ್ರೀ (ಪ್ರಥಮ ವಾಣಿಜ್ಯ), ತೃತೀಯ ಸ್ಥಾನ ಸ್ವರ್ಣಕೀರ್ತಿ ಶೆಣೈ,( ದ್ವಿತೀಯ ಕಲಾ), ನಿತ್ಯ ಕುಮಾರಿ (ಪ್ರಥಮ ವಾಣಿಜ್ಯ) ಪಡೆದುಕೊಂಡಿರುತ್ತಾರೆ.

### ಕಾಲೇಜು ಮಟ್ಟದ ರಂಗೋಲಿ :

### ದ್ವಿತೀಯ ಸ್ಥಾನ

ಲಕ್ಷ್ಮೀ ಮೆಮೋರಿಯಲ್ ಕಾಲೇಜ್ ಕೊಡಿಯಾಲ್‌ಬೈಲ್‌ನಲ್ಲಿ ನಡೆದ ರಂಗೋಲಿ ಸ್ಪರ್ಧೆಯಲ್ಲಿ ನಮ್ಮ ವಿದ್ಯಾರ್ಥಿನಿಯರಾದ ಸ್ವಾತಿ, ಸ್ವಾತಿ ಆಚಾಯ ರ್, ಬಿಂದುಶ್ರಿ ದ್ವಿತಿಯ ಸ್ಥಾನವನ್ನು ಗಳಿಸಿದ್ದಾರೆ.

ಸಂಘದ ವತಿಯಿಂದ ನಡೆದ ಕ್ಲೇಮಾಡೆಲಿಂಗ್ ಸ್ಪರ್ಧೆಯಲ್ಲಿ ವಿಜೇತರಾದವರು.:- ಪ್ರಥಮ :ಕಾವ್ಯ ಎಸ್. ಎನ್ (ದ್ವಿತೀಯ ವಿಜ್ಞಾನ ವಿಭಾಗ), ದ್ವಿತೀಯ : ಮನೋಜ್ ವೈ. ಎಲ್ (ಪ್ರಥಮ ವಿಜ್ಞಾನ ವಿಭಾಗ), ತೃತೀಯ : ಶಿವರಾಜ್ (ದ್ವಿತೀಯ ವಾಣಿಜ್ಯ ವಿಭಾಗ)

ದ್ವಿತೀಯ ವಾಣಿಜ್ಯ ವಿಭಾಗ ಹಾಗೂ ದ್ವಿತೀಯ ವಿಜ್ಞಾನ ವಿಭಾಗದ ವಿದ್ಯಾರ್ಥಿಗಳು ವಿವಿಧ ದಿನಾಂಕಗಳನ್ನು ಸಾಂಸ್ಕೃತಿಕ ಕಾರ್ಯಕ್ರಮವನ್ನು ನಡೆಸಿಕೊಟ್ಟರು.

### ಹೆರಿಟೇಜ್ ಕ್ಲಬ್ : 15.8.14



ಭಗೀರಥ ಪಾರಂಪರಿಕ ಕೂಟದ ವಿದ್ಯಾರ್ಥಿಗಳು ಬಂಟ್ವಾಳದ 'ರಾಣಿ ಅಬ್ಬಕ್ಕ ವಸ್ತು ಸಂಗ್ರಹಾಲಯ' ಕ್ಕೆ ಭೇಟಿ ನೀಡಿದರು. ವಸ್ತು ಸಂಗ್ರಹಾಲಯದ ನಿರ್ದೇಶಕ ಶ್ರೀ ತುಕರಾಮ ಪೂಜಾರಿ ವಿದ್ಯಾರ್ಥಿಗಳಿಗೆ ಮಾಹಿತಿ

ನೀಡಿದರು. ಈ ಸಂದರ್ಭದಲ್ಲಿ ಕೂಟದ ನಿರ್ದೇಶಕ ಉಪನ್ಯಾಸಕ ತಿರುಮಲೇಶ್ವರ್ ಪ್ರಶಾಂತ್ ಇವರ ಜೊತೆ ಉಪನ್ಯಾಸಕರಾದ ರಾಜಾರಾಮವರ್ಮ, ಗಿರೀಶ್ ಕುಮಾರ್, ಕರುಣಾಕರ, ಮಹೇಶ್, ದಿನೇಶ್, ವಿಲಾಸಿನಿ, ಶಶಿಕಲಾ, ಸುಷ್ಮಾ, ರಮ್ಯಾ ಉಪಸ್ಥಿತರಿದ್ದರು.

### ಪ್ರತಿಭಾರಾಮ ಸಾಹಿತ್ಯ ಸಂಘ : 6.8.14

ಪ್ರತಿಭಾರಾಮ ಸಾಹಿತ್ಯ ಸಂಘದ ವತಿಯಿಂದ 'ಬರವಣಿಗೆ ಕ್ಷೇತ್ರದ ಅವಕಾಶಗಳು' ಎಂಬ ವಿಶೇಷ ಉಪನ್ಯಾಸ ಕಾರ್ಯಕ್ರಮ ನಡೆಯಿತು.




ಅತಿಥಿಯಾಗಿ ವಿವೇಕಾನಂದ ಕಾಲೇಜು ಪುತ್ತೂರಿನ ಪತ್ರಿಕೋದ್ಯಮ ವಿಭಾಗದ ಮುಖ್ಯಸ್ಥ ರಾಕೇಶ್ ಕುಮಾರ್ ಆಗಮಿಸಿ, ಮಾರ್ಗದರ್ಶನ ಮಾಡಿದರು. ಸಮಾಜಶಾಸ್ತ್ರ ಉಪನ್ಯಾಸಕ ರಾಜಾರಾಮವರ್ಮ ಉಪಸ್ಥಿತರಿದ್ದರು. ಸಂಘದ ನಿರ್ದೇಶಕಿ ಶೋಭಾ ವಿ.ಶೆಟ್ಟಿ ಕಾರ್ಯಕ್ರಮ ನಿರೂಪಿಸಿ, ಸಹನಿರ್ದೇಶಕಿ ರೇಣುಕಾ ವಂದಿಸಿದರು.

ಅದೇ ರೀತಿ ಚಿತ್ರಗಾರರಿಗಾಗಿ ಕೃಷ್ಣ ಜನ್ಮಾಷ್ಟಮಿಯ ಪ್ರಯುಕ್ತ ಚಿತ್ರಕಲಾ ಸ್ಪರ್ಧೆಯನ್ನು ಹಮ್ಮಿಕೊಳ್ಳಲಾಯಿತು. ಪ್ರಥಮ ಸ್ಥಾನವನ್ನು ಸುದರ್ಶನ್ (ಪ್ರ.ವಾ.ಎ), ದ್ವಿತೀಯ ಸ್ಥಾನವನ್ನು ಪ್ರೀತಮ್ (ಪ್ರ.ವಿ.ಎ), ತೃತೀಯ ಸ್ಥಾನವನ್ನು ಪ್ರಶಾಂತ್ (ಪ್ರ.ವಾ.ಎ) ಪಡೆದರು.

### ಭಾಮತಿ ವಾಣಿಜ್ಯ ಸಂಘ: 6.08.2014

ಭಾಮತಿ ವಾಣಿಜ್ಯ ಸಂಘದ ವತಿಯಿಂದ "ಭಾರತದಲ್ಲಿ ಕ್ಷೀರಕ್ರಾಂತಿ" ಎಂಬ ವಿಚಾರದ ಕುರಿತು ಉಪನ್ಯಾಸ ಕಾರ್ಯಕ್ರಮವು ಕಾಲೇಜಿನ ಅಜಿತಕುಮಾರ ಸಭಾಭವನದಲ್ಲಿ ನಡೆಯಿತು.

ಅತಿಥಿಯಾಗಿ ಜಿಲ್ಲಾ ಹಾಲು ಉತ್ಪಾದಕರ ಸಹಕಾರಿ ಒಕ್ಕೂಟದ ನಿವೃತ್ತ ಅಧಿಕಾರಿ ಡಿ.ಎಸ್. ಹೆಗ್ಡೆ ಆಗಮಿಸಿ, 'ಕೃಷಿಗೆ ಪೂರಕವಾದ ಪಶು ಸಂಗೋಪನೆಯನ್ನು ವ್ಯವಸಾಯಿಕವಾಗಿ ಮಾಡಬೇಕು. ಭಾರತದ ಜನಸಂಖ್ಯೆ ಮಿತಿಮೀರಿ ಹೋದರು ಭಾರತದ ಗೋಸಂಪತ್ತು ಕುಸಿದಿದೆ ಎಂದರು. ಹೈನುಗಾರಿಕೆ ಭಾರತ ದೇಶದಲ್ಲಿ ಭದ್ರವಾದ ಬುನಾದಿಯನ್ನು ಹಾಕಿದೆ' ಎಂದರು.

ಈ ಸಂದರ್ಭದಲ್ಲಿ ಭಾಮತಿ ವಾಣಿಜ್ಯ ವಸ್ತು ಪ್ರದರ್ಶಿನಿ ಅನಾವರಣ ಮಾಡಿದರು. ಇದರಲ್ಲಿ ವಾಣಿಜ್ಯ ವ್ಯವಹಾರಕ್ಕೆ ಸಂಬಂಧಿಸಿದ ಪ್ರದರ್ಶನಗಳಿದ್ದವು. ಪ್ರಾಂಶುಪಾಲ ಕೃಷ್ಣಪ್ರಸಾದ್ ಅಧ್ಯಕ್ಷತೆಯನ್ನು ವಹಿಸಿದ್ದರು. ಸಂಘದ ಸಹನಿರ್ದೇಶಕಿ ಉಪನ್ಯಾಸಕಿ ಜಯಲಕ್ಷ್ಮೀ ಸ್ವಾಗತಿಸಿ, ಸಂಘದ ನಿರ್ದೇಶಕಿ ಶೋಭಾ ವಂದಿಸಿದರು. ರಕ್ಷಿತ ಸಿ.ಕೆ. ಕಾರ್ಯಕ್ರಮ ನಿರೂಪಿಸಿದರು.

### ಭೂಮಿಕಾ ಪರಿಸರ ಸಂಘ ಆಗಸ್ಟ್ 21

ಭೂಮಿಕಾ ಪರಿಸರ ಸಂಘದ ವತಿಯಿಂದ



ಕಾಲೇಜಿನ ವಠಾರದಲ್ಲಿ ತುಳಸಿ ಗಿಡಗಳನ್ನು ನೆಡುವ ಕಾರ್ಯಕ್ರಮವನ್ನು ವಿದ್ಯಾರ್ಥಿಗಳಿಂದ ನಡೆಸಿಕೊಡಲಾಯಿತು. ಈ ಸಂದರ್ಭದಲ್ಲಿ ಪರಿಸರ ಸಂಘದ ನಿರ್ದೇಶಕಿ, ಉಪನ್ಯಾಸಕಿ ರಮ್ಯಾ ಮತ್ತು ಸಹ ನಿರ್ದೇಶಕಿ ಮಹಿಮಾ ಉಪಸ್ಥಿತರಿದ್ದರು.

### ಎರೆಹುಳ ಗೊಬ್ಬರ ತಯಾರಿ : 30-08-2014

ಭೂಮಿಕಾ ಪರಿಸರ ಸಂಘದ ವತಿಯಿಂದ ಎರೆಹುಳ ಗೊಬ್ಬರವನ್ನು ಮಾಡುವ ಪ್ರಥಮ ಹಂತದ ಪ್ರಾತ್ಯಕ್ಷಿಕೆಯನ್ನು ಕಾಲೇಜಿನ ಜೀವಶಾಸ್ತ್ರ ವಿಭಾಗದ ಉಪನ್ಯಾಸಕಿ ಶೈಲಿನಿ ನಡೆಸಿಕೊಟ್ಟರು. ಈ ಸಂದರ್ಭದಲ್ಲಿ ಪರಿಸರ ಸಂಘದ ನಿರ್ದೇಶಕಿ, ರಮ್ಯ, ಭೌತಶಾಸ್ತ್ರ ಉಪನ್ಯಾಸಕಿ ಮಹಿಮಾ ಸಮಾಜಶಾಸ್ತ್ರ ಉಪನ್ಯಾಸಕ ರಾಜಾರಾಮವರ್ಮ, ಸಂಸ್ಕೃತ ಉಪನ್ಯಾಸಕಿ ಶಶಿಕಲಾ ಉಪಸ್ಥಿತರಿದ್ದರು.

### ವಿಚಾರ ಸಂಕಿರಣದಲ್ಲಿ ಭಾಗಿ : 9.8.14

ವಿವೇಕಾನಂದ ಕಾಲೇಜಿನಲ್ಲಿ ಸಂಶೋಧನಾ ಅಧ್ಯಯನದ ಕುರಿತು ನಡೆದ ವಿಚಾರಸಂಕಿರಣದಲ್ಲಿ ಪದವಿಪೂರ್ವ ವಿಭಾಗದ ಉಪನ್ಯಾಸಕರು ಭಾಗವಹಿಸಿದರು.

### ಸರಸ್ವತಿ ವಂದನೆಗೆ ಭೇಟಿ : 21.8.14

ಕಾಲೇಜಿನ ದೈನಂದಿನ ಸರಸ್ವತಿ ವಂದನೆಗೆ ವಿಜಯಬ್ಯಾಂಕ್‌ನ ಕಲ್ಲಡ್ಕ ಶಾಖೆಯ ಪ್ರಬಂಧಕ ಡೆರಿಕ್ ಡಿ'ಸೋಜ, ಮಂಗಳೂರು ವಿಜಯಬ್ಯಾಂಕ್ ಶಾಖೆಯ ಪ್ರಬಂಧಕರಾದ ರಾಜಾರಾಮ ಶೆಟ್ಟಿ ಮತ್ತು ಮಂಗಳೂರು ವಿಜಯಬ್ಯಾಂಕ್ ಜನರಲ್ ಮ್ಯಾನೇಜರ್ ಕುಸುಮಾ ಶೆಟ್ಟಿ ಭೇಟಿ ನೀಡಿ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದರು.

### ಭಜನೆ 28-0-2014

ಕಲ್ಲಡ್ಕ ಶ್ರೀರಾಮ ಪದವಿ ಪೂರ್ವ ಕಾಲೇಜಿನ ಮಾಸಿಕ ಭಜನೆಯನ್ನು ದ್ವಿತೀಯ ವಾಣಿಜ್ಯ ವಿಭಾಗದ ವಿದ್ಯಾರ್ಥಿಗಳು ನಡೆಸಿಕೊಟ್ಟರು.

## ಪದವಿ

### ಸಾಂಸ್ಕೃತಿಕ ಕಾರ್ಯಕ್ರಮ : 08.08.2014



ಪ್ರಥಮ ವಿಭಾಗದ ವಿದ್ಯಾರ್ಥಿಗಳಿಂದ ಹಬ್ಬ ಹರಿದಿನಗಳು ಎಂಬ ಸಾಂಸ್ಕೃತಿಕ ಕಾರ್ಯಕ್ರಮವು ಅಜಿತಕುಮಾರ ಸಭಾಭವನದಲ್ಲಿ ನಡೆಯಿತು. ಕಾರ್‍ಯಕ್ರಮವನ್ನು ಚೆನ್ನಪ್ಪ ಕೋಟ್ಯಾನ್ ನಾಗನ ಪ್ರಾತ್ಯಕ್ಷಿಕೆಗೆ ಹಾಲು ಇಡುವ ಮೂಲಕ ಉದ್ಘಾಟಿಸಿದರು. ಕಾರ್‍ಯಕ್ರಮದ ಅವಲೋಕನವನ್ನು ಸುರೇಶ್ ಪರ್ಕಳ ನಡೆಸಿಕೊಟ್ಟರು. ರಾಜ್ಯದ ಹಬ್ಬಗಳಾದ ದೀಪಾವಳಿ, ನವರಾತ್ರಿ, ಯುಗಾದಿ, ಶ್ರೀ ಕೃಷ್ಣಾಷ್ಟಮಿ, ಗಣೇಶ ಚತುರ್ಥಿ, ಹೋಳಿಗಳ ವಿಶೇಷ ಪ್ರದರ್ಶನ ನೀಡಿದರು.

### ಎನ್.ಎಸ್.ಎಸ್ ಉದ್ಘಾಟನೆ : 11.08.2014

ಪ್ರಥಮ ವರ್ಷದ ರಾಷ್ಟ್ರೀಯ ಸೇವಾ ಯೋಜನಾ ಘಟಕವನ್ನು ವಿವೇಕಾನಂದ ಕಾಲೇಜಿನ ಅರ್ಥಶಾಸ್ತ್ರ ಉಪನ್ಯಾಸಕ ಹಾಗೂ ಕಾಲೇಜಿನ ಎನ್.ಎಸ್. ಎಸ್ ಘಟಕಾಧಿಕಾರಿ ಡಾ. ಅರುಣ್ ಪ್ರಕಾಶ್ ಉದ್ಘಾಟಿಸಿದರು.

ನಾವು ಪಾಲಿಸುವ ನೈತಿಕತೆಯಿಂದ



ಇನ್ನೊಬ್ಬರ ಮನಸ್ಸಿಗೆ ಅದು ನೋವನ್ನುಂಟು ಮಾಡಬಾರದು. ಉಳ್ಳವರಿಗೆ ಮಾತ್ರ ಗೌರವಕೊಡುವ ವಿಚಾರಗಳು ನಮ್ಮಲ್ಲಿ ಮೂಡಬಾರದು. ಪ್ರತಿವೃತ್ತಿಯವರಿಗೂ ನಾವು ಗೌರವವನ್ನು ಕೊಡುವುದನ್ನು ಕಲಿಯಬೇಕೆಂದರು. ನಾವು ತುಂಬ ತಾಂತ್ರಿಕತೆಯ ಜೀವನಕ್ಕೆ ಒಗ್ಗಿಕೊಂಡು ನೈತಿಕತೆಯನ್ನು

ಮರೆತು ಬಿಡುತ್ತಿದ್ದೇವೆ. ಸೇವಾಯೋಜನೆಯು ಹಿರಿಯರಿಗೆ ಗೌರವ ಕೊಡುವುದನ್ನು ಹಾಗೂ ಮೌಲ್ಯಧಾರಿತ ಅಂಶಗಳನ್ನು ತಿಳಿಹೇಳುತ್ತದೆ. ರಾಷ್ಟ್ರೀಯ ಸೇವಾಯೋಜನೆಯಲ್ಲಿ ಆಜ್ಞೆಗೆ ಅವಕಾಶವಿಲ್ಲದೆ ಶ್ರಮವೇ ಇಲ್ಲಿ ಪ್ರಮುಖವಾಗಿರುತ್ತದೆ. ಯೋಜನೆಯು ನಡೆಸುವ ಶಿಬಿರಗಳು ಯಾವುದೇ ಮೋಜಿಗೆ ಅವಕಾಶ ಮಾಡಿಕೊಡುವುದಿಲ್ಲ. ಅದರ ಬದಲು ಎಲ್ಲಾ ಜಾತಿ ಭೇದಗಳನ್ನು ಮರೆತು ವಿದ್ಯಾರ್ಥಿಗಳು ಒಗ್ಗೂಡಿ-ಕೊಂಡು ದುಡಿಯುತ್ತಾರೆ ಎಂದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ನಾರಾಯಣ ಸೋಮಾಯಾಜಿ ವಹಿಸಿದ್ದರು. ಕಾಲೇಜಿನ ಪ್ರಾಂಶುಪಾಲ ಕೃಷ್ಣಪ್ರಸಾದ ಕಾಯರ್‌ಕಟ್ಟೆ ನೂತನವಾಗಿ ಆರಂಭಗೊಂಡ ರಾ.ಸೇ.ಯೋಜನಾ ಘಟಕಕ್ಕೆ ಶುಭ ಹಾರೈಸಿದರು.

ಎನ್.ಎಸ್.ಎಸ್ ಘಟಕ ಯೋಜನಾಧಿಕಾರಿ ಹಾಗೂ ಕಾಲೇಜಿನ ಅರ್ಥಶಾಸ್ತ್ರ ಉಪನ್ಯಾಸಕ ಹರೀಶ್ ವಿಟ್ಲ ಪ್ರಾಸ್ತಾವಿಕ ಮಾತುಗಳನ್ನಾಡಿ ಸ್ವಾಗತಿಸಿ, ಘಟಕ ನಾಯಕ ರಾಕೇಶ್ ಕುಮಾರ್ ವಂದಿಸಿ, ತೇಜಸ್ವಿನಿ ಕಾರ್ಯಕ್ರಮ ನಿರೂಪಿಸಿದರು.

## ಮಾಹಿತಿ ಕಾರ್ಯಕ್ರಮ : 15.04.2014

ಎನ್.ಎಸ್.ಎಸ್ ನ ವತಿಯಿಂದ ನಡೆದ ಮಾಹಿತಿ ಕಾರ್ಯಕ್ರಮವನ್ನು ಶ್ರೀ ವೆಂಕಟರಮಣ ಸ್ವಾಮಿ ಕಾಲೇಜಿ ಕನ್ನಡ ಉಪನ್ಯಾಸಕರಾದ ಶಿವಣ್ಣ ಪ್ರಭು ನಡೆಸಿಕೊಟ್ಟರು. ಎನ್.ಎಸ್.ಎಸ್ ಎಂದರೆ ಯಾವುದೇ ಕೆಲಸ ಇರಲಿ ಅದು ಗರಿಷ್ಠವಲ್ಲ ಹಾಗೂ ಕನಿಷ್ಠವಲ್ಲ ಎಂದು ಹೇಳಿದರು. ಶಿಬಿರದ ಸ್ಥಳ ಪ್ರಶಾಂತ ಸ್ಥಳದಲ್ಲಿರಬೇಕು. ಶಿಬಿರದ ನಿಯಮಗಳಿಗೆ ಬದ್ಧರಾಗಿರಬೇಕು ಎಂದರು.

ಎನ್.ಎಸ್.ಎಸ್‌ನ ಮಹತ್ವ, ಸೇವಾ ಯೋಜನೆ ವಾರ್ಷಿಕ ವಿಶೇಷ ಶಿಬಿರದ ಆಯೋಜನೆಯ ವಿವರಗಳನ್ನು ತಿಳಿಸಿದರು. ಅದೇ ದಿನ ಸ್ವಯಂಸೇವಕರು ಕಾಲೇಜಿನ ಆವರಣದ ಸ್ವಚ್ಛತೆ ಹಾಗೂ ಶ್ರಮದಾನ ನೇರವೇರಿಸಿದರು.

ಎನ್.ಎಸ್.ಎಸ್ ಘಟಕಾಧಿಕಾರಿ ಹಾಗೂ ಅರ್ಥಶಾಸ್ತ್ರ ಉಪನ್ಯಾಸಕ ಹರೀಶ್ ಸ್ವಾಗತಿಸಿ, ಅಜಯ್ ವಂದಿಸಿದರು.

## ವಾಣಿಜ್ಯ ಸಂಘ : 19.08.2014

ಪ್ರಬೋಧ ವಾಣಿಜ್ಯ ಸಂಘದ ವತಿಯಿಂದ ಇ-ಬ್ಯಾಂಕಿಂಗ್ ಮತ್ತು ಇ- ಕಾಮರ್ಸ್ ಎಂಬ ವಿಷಯದ ಬಗ್ಗೆ ಶ್ರೀ ವೆಂಕಟರಮಣ ಸ್ವಾಮಿ ಕಾಲೇಜಿನ ನಿವೃತ್ತ ವಾಣಿಜ್ಯಶಾಸ್ತ್ರ ಉಪನ್ಯಾಸಕ ಪ್ರೊ. ರಘುನಂದನ್ ಮಾತನಾಡಿ, ಡೆಬಿಟ್ ಕಾರ್ಡ್‌ನ್ನು ಜಾಸ್ತಿ ಬಳಕೆ ಮಾಡುವುದರಿಂದ ನಮ್ಮ ಸಾಲದ ಹೊರೆ ಕಡಿಮೆಯಾಗುತ್ತದೆ. ಕ್ರೆಡಿಟ್ ಕಾರ್ಡ್‌ನ ಬಳಕೆ ಸಾಲವನ್ನು ಹೆಚ್ಚಿಸುತ್ತದೆ. ಸಾಲವು ನಮ್ಮ ಜೀವನವನ್ನು ಅಧೋಗತಿಯತ್ತ ಕೊಂಡೊಯ್ಯುತ್ತದೆ ಭಾರತೀಯ ಸಂಸ್ಕೃತಿಗೆ ಸಾಲ ಪೂರಕವಲ್ಲ ಎಂದರು.

ವೇದಿಕೆಯಲ್ಲಿ ಕಾಲೇಜಿನ ಪ್ರಾಂಶುಪಾಲ ಕೃಷ್ಣಪ್ರಸಾದ ಉಪಸ್ಥಿತರಿದ್ದು, ಭವ್ಯ ಸ್ವಾಗತಿಸಿ, ಮೋಹಿನಿ ವಂದಿಸಿ ಮಾನಸ ನಿರೂಪಿಸಿದರು.

## ಹೆರಿಟೇಜ್ ಕ್ಲಬ್ : 19.08.2014

ಪ್ರಭಾಸ ಹೆರಿಟೇಜ್ ಕ್ಲಬ್‌ನ ವತಿಯಿಂದ "ಐತಿಹಾಸಿಕ ಸ್ಮಾರಕಗಳ ಸಂರಕ್ಷಣೆ" ಎಂಬ ವಿಷಯದ ಬಗ್ಗೆ ಶ್ರೀ ವೆಂಕಟರಮಣ ಸ್ವಾಮಿ ಕಾಲೇಜಿನ ಇತಿಹಾಸ ಉಪನ್ಯಾಸಕ ಡಾ. ತುಕರಾಮ ಪೂಜಾರಿ ಮಾತನಾಡಿ ಹಳೆ ಕಾಲದ ವಸ್ತುಗಳನ್ನು ಸಂರಕ್ಷಣೆ ಹೇಗೆ ಮಾಡಬಹುದು ಎಂದು ಸವಿಸ್ತಾರವಾಗಿ ತಿಳಿಸಿಕೊಟ್ಟರು. ಅಧ್ಯಕ್ಷತೆ ರಾಜಾರಾಮ ವರ್ಮ ವಹಿಸಿದವರು. ಪ್ರಭಾಸ ಪಾರಂಪರಿಕ ಕೂಟದ ನಿರ್ದೇಶಕಿಯಾದ ಶ್ರೀಮತಿ ರೇಖಾ ಆಯೋಜಿಸಿದರು. ವಿದ್ಯಾರ್ಥಿನಿ ಶಂಕರಿ ಸ್ವಾಗತಿಸಿ, ಮಧುಶ್ರೀ ವಂದಿಸಿದರು.

## ವಿವಿಧ ಸ್ಪರ್ಧೆಗಳು :

ಪ್ರಜ್ಞಾನ ಸಾಹಿತ್ಯ ಸಂಘದ ವತಿಯಿಂದ ಕೃಷ್ಣಾಷ್ಟಮಿಯ ಪ್ರಯುಕ್ತ ಕವನ ಸ್ಪರ್ಧೆ ಹಾಗೂ ಚಿತ್ರಕಲಾ ಸ್ಪರ್ಧೆ ನಡೆಯಿತು. ಸುಮಾರು 22 ವಿದ್ಯಾರ್ಥಿಗಳು ಭಾಗವಹಿಸಿದ್ದರು.

ದಿನಾಂಕ 28.08.2014 ಸಾಂಸ್ಕೃತಿಕ ಸಂಘ ಪ್ರದೀಪ್ತ ಸಾಂಸ್ಕೃತಿಕ ಸಂಘದ ವತಿಯಿಂದ ಗಣೇಶ ಚತುರ್ಥಿಯ ಪ್ರಯುಕ್ತ ಗಣೇಶನ ಮಣ್ಣಿನ ಮಾದರಿ ಹಾಗೂ ಗಣೇಶ ಸ್ತುತಿಯ ಭಕ್ತಿಗೀತೆ ಸ್ಪರ್ಧೆಯು ನಡೆಯಿತು.

## ಸಾಂಸ್ಕೃತಿಕ ಸಂಘ 28.08.2014

ಪ್ರದೀಪ್ತ ಸಾಂಸ್ಕೃತಿಕ ಸಂಘದ ವತಿಯಿಂದ ಗಣೇಶ ಚತುರ್ಥಿಯ ಪ್ರಯುಕ್ತ ಗಣೇಶನ ಮಣ್ಣಿನ ಮಾದರಿ ಹಾಗೂ ಗಣೇಶ ಸ್ತುತಿಯ ಭಕ್ತಿಗೀತೆ ಸ್ಪರ್ಧೆಯು ನಡೆಯಿತು.

## ಪದವಿಪೂರ್ವ ಹಾಗೂ ಪದವಿ ಪೋಷಕರ ಸಭೆ: 20.08.2014




ಶ್ರೀರಾಮ ಪದವಿಪೂರ್ವ ಹಾಗೂ ಪದವಿ ವಿಭಾಗಗಳ 'ಪೋಷಕರ ಸಭೆ' ಬೇರೆ ಬೇರೆ ಅವಧಿಗಳಲ್ಲಿ ಅಜಿತಕುಮಾರ ಸಭಾಭವನದಲ್ಲಿ ನಡೆಯಿತು.

ಸಂಸ್ಥೆಯ ಪ್ರಾಚಾರ್ಯರಾದ ಕೃಷ್ಣಪ್ರಸಾದ್ ಇವರು ಪ್ರಾಸ್ತವಿಕವಾಗಿ ಮಾತನಾಡಿ, ಕಳೆದ ಸಾಲಿನ ಫಲಿತಾಂಶ ಈ ವರ್ಷದ ದಾಖಲಾತಿಯ ಅಂಕಿ ಅಂಶ ಮತ್ತು ವಾರ್ಷಿಕ ಯೋಜನೆಯ ಬಗ್ಗೆ ತಿಳಿಸಿದರು. ನಂತರ ನಡೆದ ಸಂವಾದ ಕಾರ್ಯಕ್ರಮದಲ್ಲಿ ತಮ್ಮ ಮಕ್ಕಳ ಶೈಕ್ಷಣಿಕ ಕುಂದುಕೊರತೆಗಳ ಬಗ್ಗೆ, ಸಂಸ್ಥೆಯ ಅಭಿವೃದ್ಧಿಗೆ ಪೂರಕವಾದ ಅಂಶಗಳ ಬಗ್ಗೆ ಪೋಷಕರು ಚರ್ಚಿಸಿದರು. ವಿದ್ಯಾಕೇಂದ್ರದ ಸಂಚಾಲಕ ಡಾ। ಪ್ರಭಾಕರ ಭಟ್ ಪೋಷಕರಿಗೆ ಮಕ್ಕಳ ಬಗ್ಗೆ ಅತೀ ಕಾಳಜಿ ವಹಿಸಬೇಕೆಂದು ಹೇಳಿದರು. ವೇದಿಕೆಯಲ್ಲಿ ಪೊಳಲಿ ತಪೋವನದ ಸ್ವಾಮೀಜಿ ಶ್ರೀ ವಿವೇಕ ಚೈತನ್ಯ ಉಪಸ್ಥಿತರಿದ್ದು ಪೋಷಕರು ತಮ್ಮ ಮಕ್ಕಳು ಮಾಡುವ ತಪ್ಪನ್ನು ತಿದ್ದಿ ಮುನ್ನಡೆಯುವಂತೆ ಸಹಕರಿಸಬೇಕೆಂದು ತಿಳಿಸಿದರು.

## ಅಲ್ಲಲ್ಲಿ ರಕ್ಷಾಬಂಧನ ಕಾರ್ಯಕ್ರಮ :

ಶ್ರೀರಾಮ ವಿದ್ಯಾಕೇಂದ್ರದ ವಿವಿಧ ವಿಭಾಗಗಳಲ್ಲಿ ರಕ್ಷಾಬಂಧನ ಕಾರ್ಯಕ್ರಮವನ್ನು ಆಚರಿಸಲಾಯಿತು. ಶ್ರೀರಾಮ ಶಿಶುಮಂದಿರದ ಪುಟಾಣಿಗಳಿಗೆ ಶ್ರೀರಾಮ ಪದವಿಪೂರ್ವ ವಿದ್ಯಾಲಯದ ಉಪನ್ಯಾಸಕಿ ಅಕ್ಷತಾ, ಶ್ರೀ ಗಣೇಶ ಶಿಶುಮಂದಿರದ ಮಕ್ಕಳಿಗೆ ಶ್ರೀರಾಮ ಶಿಶುಮಂದಿರ ಆಡಳಿತ ಮಂಡಳಿ ಸದಸ್ಯರಾದ ಶ್ರೀಮತಿ ಮಲ್ಲಿಕಾ ಶೆಟ್ಟಿ ಮತ್ತು ಶ್ರೀಮತಿ ರಾಜೀವಿ, ಶ್ರೀಅಕ್ಕ ಮಹಾದೇವಿ



ಶಿಶುಮಂದಿರದ ಮಕ್ಕಳಿಗೆ, ಶ್ರೀರಾಮ ಪ್ರೌಢಶಾಲೆಯ ಅನಿತಾ, ಶ್ರೀಕೃಷ್ಣ ಶಿಶುಮಂದಿರದ ಮಕ್ಕಳಿಗೆ, ಶ್ರೀರಾಮ ಶಿಶುಮಂದಿರದ ಆಡಳಿತ ಮಂಡಳಿ ಸದಸ್ಯರಾದ ಶ್ರೀಮತಿ ವೀಣಾ ಮತ್ತು ಶ್ರೀಮತಿ ವನಿತಾ, ಶ್ರೀ ಸರಸ್ವತಿ ಶಿಶುಮಂದಿರದ ಮಕ್ಕಳಿಗೆ, ಶ್ರೀರಾಮ ಶಿಶುಮಂದಿರ ಆಡಳಿತ ಮಂಡಳಿ ಸದಸ್ಯರಾದ ಶ್ರೀಮತಿ ಆಶಾ ಪ್ರಸಾದ್ ಇವರುಗಳು ರಕ್ಷಾಬಂಧನದ ಮಹತ್ವವನ್ನು ತಿಳಿಸಿ ಶುಭ ಹಾರೈಸಿದರು. ಮಕ್ಕಳು ಅಂಚೆಕಛೇರಿ, ಬ್ಯಾಂಕುಗಳು, ಪ್ರೆಸ್, ಅಂಗಡಿ, ಪಂಚಾಯಿತಿ- ಹೀಗೆ ಬೇರೆ ಬೇರೆ



ಕಡೆಗಳಲ್ಲಿ ರಕ್ಷೆ ಕಟ್ಟಿ ಶುಭಾಶಯ ಕೋರಿದರು.

ಶ್ರೀರಾಮ ಪ್ರಾಥಮಿಕ ಶಾಲೆಯಲ್ಲಿ ಶ್ರೀರಾಮ ಶಿಶು ಮಂದಿರದ ವ್ಯವಸ್ಥಾಪಕರು ಹಾಗೂ ಶ್ರೀರಾಮ ಪ್ರಾಥಮಿಕ ಶಾಲೆಯ ಪೋಷಕರಾದ ಶ್ರೀಮತಿ ಸುಧಾ ಸೂರ್ಯ ಭಟ್ ಇವರು ಪೌರಾಣಿಕ ಹಾಗೂ ನೈಜ ಕಥೆಗಳ ಮೂಲಕ ರಕ್ಷಾಬಂಧನದ ಮಹತ್ವವನ್ನು ತಿಳಿಸಿದರು.

ಶ್ರೀರಾಮ ಪ್ರಾಥಮಿಕ ಶಾಲಾಭಿವೃದ್ಧಿ ಸಮಿತಿಯ ಸದಸ್ಯರು ಹಾಗೂ ಪೋಷಕರು ಆದ ಶ್ರೀಮತಿ ಪುಷ್ಪ ಬರ್ಕಳ ಇವರು ಅಧ್ಯಕ್ಷತೆಯನ್ನು ವಹಿಸಿಕೊಂಡಿದ್ದರು.

ಪ್ರೌಢಶಾಲೆಯಲ್ಲಿ ವಿದ್ಯಾರ್ಥಿ ಪರಿಷತ್‌ನ ರಾಜ್ಯ ಕಾರ್ಯಕಾರಿಣಿ ಸದಸ್ಯೆ ಉಪನ್ಯಾಸಕಿ ಅಕ್ಷತಾ, ಪದವಿ ಪೂರ್ವ ವಿಭಾಗದಲ್ಲಿ ವಿವೇಕಾನಂದ ಡಿ.ಎಡ್. ಕಾಲೇಜಿನ ಉಪನ್ಯಾಸಕ ಶ್ರೀರಘುರಾಜ್, ಪದವಿ ವಿಭಾಗದಲ್ಲಿ ಪ್ರೌಢಶಾಲಾ ಪ್ರಾಧ್ಯಾಪಕರಾದ ಪ್ರಶಾಂತ್ ಇವರು ರಕ್ಷಾಬಂಧನದ ಮಹತ್ವದ ಬಗ್ಗೆ ವಿದ್ಯಾರ್ಥಿಗಳಿಗೆ ತಿಳಿಸಿದರು.

ಬಾಲಕರ ವಸತಿ ನಿಲಯದಲ್ಲಿ ರಕ್ಷಾಬಂಧನದ ಮಹತ್ವವನ್ನು ಪ್ರೌಢಶಾಲಾ ಶಿಕ್ಷಕ ಜಿನ್ನಪ್ಪ ಇವರು ತಿಳಿಸಿದರು. ಬಾಲಕಿಯರ





ವಸತಿನಿಲಯದಲ್ಲಿ ಸಂಸ್ಥೆಯ ಸಂಚಾಲಕ ಡಾ॥ ಪ್ರಭಾಕರ ಭಟ್ ಕಲ್ಲಡ್ಕ ಮಾಹಿತಿ ನೀಡಿ ವಿದ್ಯಾರ್ಥಿಗಳೊಂದಿಗೆ ರಕ್ಷಾಬಂಧನ ಆಚರಿಸಿ ಶುಭ ಹಾರೈಸಿದರು.

## ಸಂಸ್ಕಾರ ಶಿಬಿರ

ಆಗಸ್ಟ್ 1 ಮತ್ತು 2 ಕಲ್ಲಡ್ಕ ಶ್ರೀರಾಮ ವಿದ್ಯಾಕೇಂದ್ರಕ್ಕೆ ನೂತನವಾಗಿ ಸೇರ್ಪಡೆಗೊಂಡ ಶಿಕ್ಷಕ ವರ್ಗದವರಿಗೆ ವಿವೇಕಾನಂದ ಕಾಲೇಜಿನಲ್ಲಿ ನಡೆದ ಸಂಸ್ಕಾರ ಶಿಬಿರಕ್ಕೆ ಪಾಲ್ಗೊಳ್ಳಲು ಅವಕಾಶ ಮಾಡಿಕೊಡಲಾಯಿತು.

# ವಿದ್ಯಾರ್ಥಿ ಅಂಕಣ

## ಕಳೆದ ಬಾರಿಯ ಸರಿಯುತ್ತರ

| | | | | |
|---|---|---|---|---|
| | 1 ವೃ | | | |
| 2 ಸು | ತ್ತ | ಳ | ತೆ | |
| | ಪ | | | 4 ತ್ರಿ |
| | ರಿ | | | ಕೋ |
| 3 ಅ | ಧಿ | ಕ | ಕೋ | ನ |

## ಪದಬಂಧ



**ಮೇಲಿನಿಂದ ಕೆಳಕ್ಕೆ**

1. ಈತನಿಗೆ ಸೇನೆಯಲ್ಲಿ ಕೆಲಸ
2. ಎಂಥ ಸೊಬಗಿನ ನೃತ್ಯ ಈ ರಾಷ್ಟ್ರೀಯ ಪಕ್ಷಿಯದು
3. ಎಲ್ಲವೂ ಮಂದಿಯ ಒಳಿತಿಗಾಗಿ
5. ಈಕೆಯದು ಮೊಸಳೆ ಕಣ್ಣೀರು
6. ಈ ಚೆಲುವೆಯ ಹಲ್ಲು ಹೊಳೆಯುತ್ತದೆ.

**ಎಡದಿಂದ ಬಲಕ್ಕೆ**

4. ಬೇಸಿಗೆಯಲ್ಲಿ ದಾಹ ನೀಗಿಸುವ ಈ ಹಾಲು ಒಂದು ವಾಣಿಜ್ಯ ಬೆಳೆ
5. ಈ ಭೂಮಿಯಲ್ಲಿ ಮರಳೇ ಆವೃತವಾಗಿದೆ.

## ಕಳೆದ ಬಾರಿ ಆಯ್ಕೆಯಾದ ಶೀರ್ಷಿಕೆಗಳು

ಅಮ್ಮ ನಿನ್ನ ಕೈತುತ್ತು ಅದು ನನ್ನ ಪಾಲಿಗೆ ಸಂಪತ್ತು

**ವರದ (10 ಆಜಾದ್)**

ಅಮ್ಮನ ಕೈತುತ್ತು, ಪ್ರೀತಿಯ ಸವಿಮುತ್ತು.

**ನಿವೇದಿತಾ (8 ಕಣ್ಣಗಿ)**

ತಾಯಿಯ ಪ್ರೀತಿ ಅಮೃತಕ್ಕಿಂತಲೂ ಮೇಲು

**ಯಶಸ್ವಿ (9 ದೇವಶಿಲ್ಪಿ)**

ಮಧುರ ಮಧುರ ಈ ಅನುಬಂಧ

**ಗೌರವ್ (ಪ್ರಥಮ ವಾಣಿಜ್ಯ)**



## ಚಿತ್ರ ನೋಡಿ ಶೀರ್ಷಿಕೆ ಬರೆಯಿರಿ



**ಮೇಲಿನ ಚಿತ್ರಕ್ಕೆ ಸರಿಹೊಂದುವ ಶೀರ್ಷಿಕೆಯನ್ನು ಬರೆದು ನಿಮ್ಮ ವಿಭಾಗದ ಸರಯೂ ಪೆಟ್ಟಿಗೆಗೆ ಹಾಕಿರಿ. ಉತ್ತಮವಾದ ಬರಹಗಳನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು.**

# ಕ್ರೀಡಾ ವರದಿ

## ಕಬಡ್ಡಿ–ಪ್ರಥಮ 16.08.2014

ಬಂಟ್ವಾಳ ತಾಲೂಕು ಅಮೆಚೂರು ಕಬಡ್ಡಿ ಅಸೋಸಿಯೇಷನ್, ಬಂಟ್ವಾಳ ರೋಟರಿ ಕ್ಲಬ್ ಹಾಗೂ ಸಾರ್ವಜನಿಕ ಶಿಕ್ಷಣ ಇಲಾಖೆ ಸಹಯೋಗದಲ್ಲಿ ಬೊಂಡಾಲ ಪ್ರೌಢ ಶಾಲೆ ಶಂಭೂರು ಇಲ್ಲಿ ನಡೆದ ಕಬಡ್ಡಿ ಪಂದ್ಯಾಟದಲ್ಲಿ ಶ್ರೀರಾಮ ಪ್ರಾಥಮಿಕ ಶಾಲಾ ಬಾಲಕರ ತಂಡವು ಪ್ರಥಮ ಸ್ಥಾನ ಪಡೆದಿದೆ.

## ಫುಟ್‌ಬಾಲ್ ಪಂದ್ಯಾಟ–ಪ್ರಥಮ

ಮಂಗಳೂರು ದಕ್ಷಿಣ ಕನ್ನಡ ಜಿಲ್ಲಾ ಫುಟ್‌ಬಾಲ್ ಅಸೋಸಿಯೇಶನ್ ವತಿಯಿಂದ ಮಂಗಳೂರು ಕೇಂದ್ರ ಮೈದಾನದಲ್ಲಿ ನಡೆದ ಜಿಲ್ಲಾಮಟ್ಟದ ಪ್ರಾಥಮಿಕ ಬಾಲಕರ ಫುಟ್‌ಬಾಲ್ ಪಂದ್ಯಾಟದಲ್ಲಿ ಶ್ರೀರಾಮ ಪ್ರಾಥಮಿಕ ಬಾಲಕರ ತಂಡವು ಪ್ರಥಮ ಸ್ಥಾನ ಗಳಿಸಿ ಚಾಂಪಿಯನ್ ಆಗಿ ಹೊರಹೊಮ್ಮಿದೆ.

## ಖೋ–ಖೋ ಹಾಗೂ ಕಬಡ್ಡಿ : ಪ್ರಥಮ

**ಜುಲೈ 27 ರಿಂದ 29/7/2014**

ಶ್ರೀರಾಮ ಪದವಿಪೂರ್ವ ಕಾಲೇಜಿನಲ್ಲಿ ವಿದ್ಯಾರ್ಥಿಗಳು ಬೀದರ್ ನಲ್ಲಿ ನಡೆದ ವಿದ್ಯಾಭಾರತಿ ಪ್ರಾಂತೀಯ ಮಟ್ಟದ ಕಬಡ್ಡಿ ಮತ್ತು ಖೋ ಖೋ ಪಂದ್ಯಾಟದಲ್ಲಿ ಪ್ರಥಮ ಸ್ಥಾನವನ್ನು ಪಡೆದಿದ್ದಾರೆ. ಆಗಸ್ಟ್ 4 ಶ್ರೀರಾಮ ಪದವಿಪೂರ್ವ ಕಾಲೇಜಿನಲ್ಲಿ ವಿದ್ಯಾರ್ಥಿಗಳು ಕೇರಳದ ವಿದ್ಯಾಭಾರತಿ ಕ್ಷೇತ್ರೀಯ ಮಟ್ಟದ ಕಬಡ್ಡಿ ಪಂದ್ಯಾಟದಲ್ಲಿ ಪ್ರಥಮ ಸ್ಥಾನವನ್ನು ಪಡೆದಿದ್ದಾರೆ.

## ಕ್ರೀಡಾ ಕೂಟ : 15.08.2014

ಸ್ವಾತಂತ್ರ್ಯ ದಿನಾಚರಣೆಯ ಪ್ರಯುಕ್ತ ಪದವಿ ವಿಭಾಗದ ಪ್ರತಾಪ ಕ್ರೀಡಾ ಸಂಘದ ವತಿಯಿಂದ ವಿವಿಧ ಆಟೋಟ ಸ್ಪರ್ಧೆಗಳು ನಡೆಯಿತು. ಹುಡುಗರ ವಿಭಾಗದ ವಾಲಿಬಾಲ್ ಹಾಗೂ ಕಬಡ್ಡಿ ಹುಡುಗಿಯರ ವಿಭಾಗಕ್ಕೆ ತ್ರೋಬಾಲ್ ಹಾಗೂ ಸಂಗೀತ ಕುರ್ಚಿ ಸ್ಪರ್ಧೆಗಳು ನಡೆದವು.

# ಸಂಸ್ಕೃತ ಸಪ್ತಾಹ

ಶ್ರೀರಾಮ ಪದವಿ ಮತ್ತು ಪದವಿಪೂರ್ವ ವಿದ್ಯಾಲಯದಲ್ಲಿ ದಿನಾಂಕ 7–8–2014 ರಿಂದ 13-8–2014ರ ತನಕ 'ಭಾರವಿ' ಸಂಸ್ಕೃತ ಸಂಘ ಇದರ ವತಿಯಿಂದ 'ಸಂಸ್ಕೃತ' ಸಪ್ತಾಹ ಕಾರ್ಯಕ್ರಮವನ್ನು ಏರ್ಪಡಿಸಲಾಗಿತ್ತು.

ಸಂಸ್ಥೆಯ ಹಿರಿಯ ವಿದ್ಯಾರ್ಥಿ ಮಂಗಳೂರಿನ ಯುವ ಇಂಜಿನಿಯರ್ ಶ್ರೀರಾಮಪ್ರಸಾದ್ ಕೊಂಬಿಲ ಸಪ್ತಾಹವನ್ನು ಉದ್ಘಾಟಿಸಿದರು. ಕಾಲೇಜಿನ ನಿವೃತ್ತ ಪ್ರಾಚಾರ್ಯರಾದ ಶ್ರೀ ಮಹೇಶ್ವರ ಭಟ್ ಸಂಸ್ಕೃತದ ಹಿರಿಮೆಯ ಬಗ್ಗೆ ಮಾತನಾಡಿದರು. ಅದಲ್ಲದೆ ಸರಸ್ವತಿ ವಂದನೆಯ ಮಹತ್ವವನ್ನು ತಿಳಿಸಿದರು., ಸಪ್ತಾಹದ ಅಂಗವಾಗಿ ವಿದ್ಯಾರ್ಥಿಗಳಿಗೆ ಸಂಸ್ಕೃತ ಕಾವ್ಯ ವಾಚನ, ಸಮೂಹಗೀತೆ, ಪ್ರಬಂಧ, ವಸ್ತುಪ್ರದರ್ಶನವನ್ನು ಏರ್ಪಡಿಸಲಾಗಿತ್ತು.

## ಬೃಹತ್ ಶೋಭಾಯಾತ್ರೆ



ಸಂಸ್ಕೃತ ಜನಜಾಗೃತಿಗಾಗಿ ಕಲ್ಲಡ್ಕದಲ್ಲಿ ದಿನಾಂಕ 12ರಂದು ಬೃಹತ್ ಶೋಭಾ ಯಾತ್ರೆ ನಡೆಸಲಾಯಿತು. ಭಾರತಮಾತೆಗೆ ಪುಷ್ಪಾರ್ಚನೆ ಮಾಡುವ ಮೂಲಕ ಶ್ರೀರಾಮ ವಿದ್ಯಾಕೇಂದ್ರದ ಸಂಚಾಲಕ ಡಾ॥ ಪ್ರಭಾಕರ ಭಟ್ ಕಲ್ಲಡ್ಕ ಚಾಲನೆ ನೀಡಿದರು. ಶೋಭಾಯಾತ್ರೆಯು ಕಾಲೇಜಿನಿಂದ ಹೊರಟು ಕೆ.ಸಿ.ರೊಡ್ ವರೆಗೆ ತಲುಪಿ ನಂತರ ಕಾಲೇಜಿನಲ್ಲಿ ಸಂಪನ್ನಗೊಂಡಿತು. ಪದವಿ ಮತ್ತು ಪದವಿಪೂರ್ವ ವಿಭಾಗದ 1,000 ವಿದ್ಯಾರ್ಥಿಗಳು ಭಾಗವಹಿಸಿದರು.






## ಸಮಾರೋಪ



ಸಮಾರೋಪ ಕಾರ್ಯಕ್ರಮದಲ್ಲಿ ಅತಿಥಿಯಾಗಿ ಮೈತ್ರೇಯಿ ಗುರುಕುಲದ ಉನ್ನತ ಶಿಕ್ಷಣ ವಿಭಾಗದ ಪ್ರಧಾನ ಆಚಾರ್ಯ ಶ್ರೀಮತಿ ಅಮೃತವರ್ಷಿಣಿಯವರು ಮಾತನಾಡಿ, ಸಂಸ್ಕೃತವು ಯಾವುದೇ ಜಾತಿ ವರ್ಗದ ಭಾಷೆಯಲ್ಲ, ಅದು ವಿಶ್ವಭಾಷೆ ವಿಶ್ವದ ಎಲ್ಲಾ ಭಾಷೆಗಳಿಗೂ ಮಾತೃಸ್ವರೂಪಿಣಿಯಾದ ಭಾಷೆ ಎಂದರು. ಸಪ್ತಾಹದ ಅಂಗವಾಗಿ ನಡೆದ ವಿವಿಧ ಸ್ಪರ್ಧೆಗಳ ವಿಜೇತರಿಗೆ ಬಹುಮಾನವನ್ನು ವಿತರಿಸಲಾಯಿತು.
ವಿವೇಕಾನಂದ ಡಿ.ಎಡ್. ಕಾಲೇಜಿನ ಉಪನ್ಯಾಸಕ ಶ್ರೀರಘುರಾಜರು, ಕಾರ್ಯಕ್ರಮದ ಕುರಿತು ಮೆಚ್ಚುಗೆಯ ಮಾತುಗಳನ್ನಾಡಿದರು.ಅಸ

ಕಾಲೇಜಿನ ಪ್ರಾಂಶುಪಾಲ ಕೃಷ್ಣಪ್ರಸಾದ್ ಉಪಸ್ಥಿತರಿದ್ದು, ಸಂಸ್ಕೃತ ಉಪನ್ಯಾಸಕಿ ಶಶಿಕಲಾ ವಂದಿಸಿದರು.

SRI RAMA VIDYAKENDRA TRUST (R.)
HANUMAN NAGAR, KALLADKA
BANTWAL TQ., DAKSHINA KANNADA, KARNATAKA 574 222
Ph.: 08255-275273 / 275183 / 275073 / 275693 / 279673 / 200085 / 279479
Website : **www.srvk.org** E-mail : **info@srvk.org**

BOOK POST

**ಸವಿಧೇ,**

Sarayu Kannada Monthly Edited and Published and Printed by B. Narayana Somayaji on behalf of Sri Rama Vidyakendra Kalladka, Bantwal Tq, D.K.
and printed at Anagha Digital Square, Kaikamba, B.C. Road.